THRINETHRA M N
Digitally signed by THRINETHRA M N
Date: 2026.05.14 17:37:14 +0530

KACD510013952019

Presented on : 16-07-2019
Registered on : 16-07-2019
Decided on : 02-05-2026
Duration : 6 years, 9 months, 17 days

## ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊಸದುರ್ಗ

**ಉಪಸ್ಥಿತರು:** ಶ್ರೀಮತಿ ತ್ರಿನೇತ್ರ.ಎಂ.ಎನ್.
ಎಂ.ಎ., ಎಲ್.ಎಲ್.ಬಿ.,
ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**ದಿನಾಂಕ: 2 ನೇ ಮೇ ಮಾಹೆ 2026**

**<u>ಅಸಲು ದಾವಾ ಸಂಖ್ಯೆ: 278/2019</u>**

ಶ್ರೀ. ದೇವಿರಪ್ಪ
ಬಿನ್ ಗೋವಿಂದಪ್ಪ ,
ಸುಮಾರು 72 ವರ್ಷ,
ವೃತ್ತಿ: ವ್ಯವಸಾಯ
ವಾಸ: ಶ್ರೀರಾಂಪುರ ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು.

....ವಾದಿಗಳು

(ವಾದಿಯರ ಪರವಾಗಿ ಶ್ರೀ ಶೇಷಾದ್ರಿ ಎಸ್. ವಕೀಲರು ಪ್ರತಿನಿಧಿಸಿರುತ್ತಾರೆ.)

ವಿರುದ್ಧ
1. ಶ್ರೀ ಚಂದ್ರಪ್ಪ ,
ಬಿನ್ ಗುಡದಪ್ಪ ,
ಸುಮಾರು 65 ವರ್ಷ ವಯಸ್ಸು,

ವೃತ್ತಿಃ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ,
ವಾಸಃ ವಾರ್ಡ್ ನಂ.1, ವಿದ್ಯಾನಗರ,
ಹೊಸದುರ್ಗ ಟೌನ್.

2. ಶ್ರೀ ಹನುಮಂತಪ್ಪ ,
ಬಿನ್ ಗುಡುದಪ್ಪ ,
ಸುಮಾರು 72 ವರ್ಷ ವಯಸ್ಸು,

3. ಶ್ರೀ ದೇವೇಂದ್ರಪ್ಪ
ಬಿನ್ ಲಕ್ಕಪ್ಪ ,
ಸುಮಾರು 42 ವರ್ಷ ವಯಸ್ಸು,

4. ಶ್ರೀಮತಿ ಕರಿಯಮ್ಮ
ಕೋಂ ರಂಗಪ್ಪ
ಸುಮಾರು 62 ವರ್ಷ ವಯಸ್ಸು,

5.ಶ್ರೀ ರಾಮಪ್ಪ
ಬಿನ್ ಗಿರಿಯಪ್ಪ ,
ಸುಮಾರು 74 ವರ್ಷ ವಯಸ್ಸು,

6. ವೀರಭದ್ರಪ್ಪ
ಬಿನ್ ಗಿರಿಯಪ್ಪ ,
**(ಮೃತಪಟ್ಟಿರುತ್ತಾರೆ)**

6(ಎ). ಶಿವಣ್ಣ ಬಿನ್ ಲೇಟ್ ವೀರಭದ್ರಪ್ಪ ,
ಸುಮಾರು 45 ವರ್ಷ ವಯಸ್ಸು,

7. ಶ್ರೀಮತಿ ಶಾರದಮ್ಮ ಕೋಂ ಹನುಮಂತಪ್ಪ ,
ಸುಮಾರು 66 ವರ್ಷ ವಯಸ್ಸು,

8. ಶ್ರೀ ದೊಡ್ಡರಂಗಪ್ಪ ಬಿನ್ ಗಿರಿಯಪ್ಪ ,
ಸುಮಾರು 65 ವರ್ಷ ವಯಸ್ಸು,
ವಾಸಃ ಸಿದ್ದರಾಮನಗರ,
ಹೊಸದುರ್ಗ ಟೌನ್,

9. ಶ್ರೀ ರಂಗಪ್ಪ ಬಿನ್ ಗೋವಿಂದಪ್ಪ ,
ಸುಮಾರು 58 ವರ್ಷ ವಯಸ್ಸು,

10. ಶ್ರೀ ಹನುಮಂತಪ್ಪ ಬಿನ್ ಗೋವಿಂದಪ್ಪ ,
ಸುಮಾರು 55 ವರ್ಷ ವಯಸ್ಸು,

ಎಲ್ಲರ ವಾಸಃ ಶ್ರೀರಂಗಾಪುರ ಗ್ರಾಮ,
ಹೊಸದುರ್ಗ ತಾಲೂಕು,
ಚಿತ್ರದುರ್ಗ ಜಿಲ್ಲೆ.

...ಪ್ರತಿವಾದಿಯರು

(ಪ್ರತಿವಾದಿ - 1, 2, 5 ಮತ್ತು 6 ರವರ ಪರವಾಗಿ ಶ್ರೀ. ಎಂ.ಎಸ್, ವಕೀಲರು )
(ಪ್ರತಿವಾದಿ-3, 4, 7 ರಿಂದ 10 ಏಕಪಕ್ಷೀಯವಾಗಿರುತ್ತಾರೆ)

| | | |
|---|---|---|
| ದಾವಾ ದಾಖಲಿಸಿದ ದಿನಾಂಕ | - | 16.07.2019 |
| ದಾವೆಯ ಸ್ವರೂಪ | - | ಪಾಲು ವಿಭಾಗ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ ದಾವೆ. |
| ಸಾಕ್ಷಿಯ ವಿಚಾರಣೆಯನ್ನು ದಾಖಲು ಮಾಡಲು ಆರಂಭವಾದ ದಿನಾಂಕ | - | 20.09.2021 |
| ತೀರ್ಪು ಪ್ರಕಟಿಸಿದ ದಿನಾಂಕಃ | - | 02.05.2026 |

**(ತ್ರಿನೇತ್ರ.ಎಂ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,**
**ಹೊಸದುರ್ಗ.**

## ತೀರ್ಪು

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಸಲ್ಲಿಸಿ, ದಾವಾ ಅನುಸೂಚಿ ಸ್ವತ್ತುಗಳಾದ ಷೆಡ್ಯೂಲ್-1 ಅ) ಹೊಸದುರ್ಗ ತಾಲೂಕು,

ಶ್ರೀರಂಗಾಪುರ ಗ್ರಾಮದ ಸ.ನಂ. 7/3, 3 ಎಕರೆ 17 ಗುಂಟೆ, ಚಕ್ಕುಬಂದಿಃ ಪೂರ್ವಕ್ಕೆ ಃ ನಡ್ಲು ಮನೆ ಲಕ್ಕದಾಸಪ್ಪ ಮತ್ತು ದಾಸಪ್ಪನವರ ಜಮೀನು, ಪಶ್ಚಿಮಕ್ಕೆಃ ಬಾಗಿಲು ಮನೆ ಗಂಗಮ್ಮ , ದೇವೀರಪ್ಪ ಮತ್ತು ದೇವೇಂದ್ರಪ್ಪ ರವರ ಜಮೀನು, ಉತ್ತರಕ್ಕೆಃ ರಸ್ತೆ ಮತ್ತು ದಕ್ಷಿಣಕ್ಕೆಃ ಕರ್ವಜ್ಣರ ಬಸಣ್ಣರ ಜಯಣ್ಣರವರ ಜಮೀನು ಮತ್ತು ಬ) ಹೊಸದುರ್ಗ ತಾಲೂಕು, ಶ್ರೀರಂಗಾಪುರ ಗ್ರಾಮದ ಸ.ನಂ. 63/1, 2 ಎಕರೆ 33 ಗುಂಟೆ, ಚಕ್ಕುಬಂದಿಃ ಪೂರ್ವಕ್ಕೆ ಃ ಹಿಂದ್ಲ ಮನೆ ಗೋವಿಂದ ಮತ್ತು ಲಕ್ಕಪ್ಪ ರವರ ಜಮೀನು, ಪಶ್ಚಿಮಕ್ಕೆಃ ನಡ್ಲು ಮನೆ ಶಿವಣ್ಣ, ಲಕ್ಕದಾಸಪ್ಪ ಮತ್ತು ಗೌಡರ ರಾಜಪ್ಪ ರವರ ಜಮೀನು, ಉತ್ತರಕ್ಕೆಃ ಗೌಡರ ಹರೀಶ ಬಿನ್ ಹನುಮಂತಪ್ಪರವರ ಜಮೀನು ಮತ್ತು ದಕ್ಷಿಣಕ್ಕೆಃ ಕರೀಂ ಸಾಬ್, ಚೋಟು ಸಾಬ್, ದಾದು ಸಾಬ್ ರವರ ಜಮೀನು, ಇದರಲ್ಲಿ ವಾದಿಗೆ ಬಾಯಿ ಮಾತಿನ ಮೂಲಕ ಬಂದಿರುವ ಪಾಲಿನ ಆಸ್ತಿಯ ಸ್ವಾಧೀನಾನುಭವದಲ್ಲಿರುವ ಷೆಡ್ಯೂಲ್-2 ಇ) ಹೊಸದುರ್ಗ ತಾಲೂಕು, ಶ್ರೀರಂಗಾಪುರ ಗ್ರಾಮದ ಸ.ನಂ. 7/3, 3 ಎಕರೆ 17 ಗುಂಟೆ, ಚಕ್ಕುಬಂದಿಃ ಪೂರ್ವಕ್ಕೆ ಃ ನಡ್ಲು ಮನೆ ಲಕ್ಕದಾಸಪ್ಪ ಮತ್ತು ದಾಸಪ್ಪನವರ ಜಮೀನು, ಪಶ್ಚಿಮಕ್ಕೆಃ ರಂಗಪ್ಪ ಮತ್ತು ಹನುಮಂತಪ್ಪ ರವರ ಪಾಲಿನ ಸರ್ವೆ ನಂ. 7/3 ರ ಜಮೀನು, ಉತ್ತರಕ್ಕೆಃ ರಸ್ತೆ ಮತ್ತು ದಕ್ಷಿಣಕ್ಕೆಃ ಹನುಮಂತಪ್ಪ ಬಿನ್ ಗುಡುದಪ್ಪರ ಪಾಲಿನ ಸರ್ವೆ ನಂ. 7/3 ರ ಜಮೀನು ಮತ್ತು ಈ) ಹೊಸದುರ್ಗ ತಾಲೂಕು, ಶ್ರೀರಂಗಾಪುರ ಗ್ರಾಮದ ಸ.ನಂ. 63/1, 2 ಎಕರೆ 33 ಗುಂಟೆ,

ಚಕ್ಕುಬಂದಿಃ ಪೂರ್ವಕ್ಕೆ ಃ ಹಿಂದ್ಲ ಮನೆ ಗೋವಿಂದ ಮತ್ತು ಲಕ್ಕಪ್ಪ ರವರ ಜಮೀನು, ಪಶ್ಚಿಮಕ್ಕೆಃ ಹನುಮಂತಪ್ಪ ಬಿನ್ ಗೋವಿಂದಪ್ಪನ ಪಾಲಿನ ಜಮೀನು, ಉತ್ತರಕ್ಕೆಃ ಶಾರದಮ್ಮ ಕೋಂ ಹನುಮಂತಪ್ಪ ಮತ್ತು ರಾಮಪ್ಪ ಪಾಲಿಗೆ ಬಂದ ಜಮೀನು ಮತ್ತು ದಕ್ಷಿಣಕ್ಕೆಃ ಚೋಟು ಸಾಬ್, ದಾದು ಸಾಬ್ ರವರ ಜಮೀನು, ಇದರಲ್ಲಿ ನಮೂದಿಸಿರುವಂತೆ ವಾದಿಯ ಭಾಗವನ್ನು ಕೊಡಿಸಬೇಕೆಂದು ಕೋರಿ ಹಾಗೂ ಶಾಶ್ವತ ನಿರ್ಭಂಧಕಾಜ್ಞೆ ನೀಡಬೇಕೆಂದು ಹಾಗೂ ನ್ಯಾಯಾಲಯಕ್ಕೆ ಸರಿ ಕಂಡ ಇತರೆ ಪರಿಹಾರಗಳನ್ನು ಕೊಡಿಸಬೇಕೆಂದು ವಾದಿ ಕೋರಿರುತ್ತಾನೆ.

2. ಈ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ

ಮೂಲ ಪುರುಷ ದಿವಂಗತ ರಂಗಣ್ಣ ಮತ್ತು ಹನುಮಕ್ಕ ರವರಿಗೆ ಮೂರು ಜನ ಮಕ್ಕಳಿದ್ದು ಅವರೆಂದರೆ 1. ಗುಡುದಪ್ಪ ಬಿನ್ ರಂಗಣ್ಣ 2. ಗಿರಿಯಪ್ಪ ಬಿನ್ ರಂಗಣ್ಣ ಮತ್ತು 3. ಗೋವಿಂದಪ್ಪ ಬಿನ್ ರಂಗಣ್ಣ. ಸದರಿ ರಂಗಣ್ಣನ 1ನೇ ಮಗ ಗುಡುದಪ್ಪನಿಗೆ ಲಕ್ಕಪ್ಪ, ರಂಗಪ್ಪ, ಹನುಮಂತಪ್ಪ ಮತ್ತು ಚಂದ್ರಪ್ಪ ಎಂಬ 4 ಜನ ಮಕ್ಕಳು ಗುಡುದಪ್ಪ ಮತ್ತು ಆತನ ಹೆಂಡತಿ ನಿಂಗಮ್ಮ ಮತ್ತು ಮಗ ಲಕ್ಕಪ್ಪ ಮರಣ ಹೊಂದಿರುತ್ತಾರೆ. ಲಕ್ಕಪ್ಪನಿಗೆ ಒಬ್ಬನೇ ಮಗ ದೇವೇಂದ್ರಪ್ಪ ಆಗಿರುತ್ತಾರೆ. ಸದರಿ ರಂಗಣ್ಣನ 2ನೇ ಮಗ ಗಿರಿಯಪ್ಪನಿಗೆ ರಾಮಪ್ಪ, ವೀರಭದ್ರಪ್ಪ, ದೊಡ್ಡರಂಗಪ್ಪ ಮತ್ತು ಹನುಮಂತಪ್ಪ ಮಕ್ಕಳಿದ್ದು, ಹನುಮಂತಪ್ಪ ಮತ್ತು ಗಿರಿಯಪ್ಪ ಮರಣ ಹೊಂದಿರುತ್ತಾರೆ.

ಹನುಮಂತಪ್ಪನಿಗೆ ಶಾರದಮ್ಮ ಎಂಬ ಹೆಂಡತಿ ಇರುತ್ತಾರೆ. ಸದರಿ ರಂಗಣ್ಣನ 3 ನೇ ಮಗ ಗೋವಿಂದಪ್ಪನಿಗೆ ದೇವೀರಪ್ಪ, ಹನುಮಂತಪ್ಪ ಮತ್ತು ರಂಗಪ್ಪ ಎಂಬ ಮಕ್ಕಳಿರುತ್ತಾರೆ. ಗೊವಿಂದಪ್ಪ ಮರಣ ಹೊಂದಿರುತ್ತಾರೆ. ಹೊಸದುರ್ಗ ತಾಲ್ಲೂಕ್ ಶ್ರೀರಂಗಾಪುರ ಗ್ರಾಮದ ಸರ್ವೆ ನಂ. 7/3 ರ ಒಟ್ಟು ವಿಸ್ತೀರ್ಣ 3 ಎಕರೆ 17 ಗುಂಟೆ, (ಖರಾಬು(ಅ)-12 ಗುಂಟೆ) ಮತ್ತು ಹೊಸದುರ್ಗ ತಾಲ್ಲೂಕ್ ಶ್ರೀರಂಗಾಪುರ ಗ್ರಾಮದ ಸರ್ವೆ ನಂ. 63/1 ರ ಒಟ್ಟು ವಿಸ್ತೀರ್ಣ 2 ಎಕರೆ 33 ಗುಂಟೆ. (ಖರಾಬು(ಅ)-2 ಗುಂಟೆ) ಆಸ್ತಿಗಳು (ದಾವಾ ಷಡ್ಯೂಲ್-1) ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ಮೂಲ ಪುರುಷ ರಂಗಣ್ಣನ ಮಕ್ಕಳು ಬಾಯಿ ಮಾತಿನ ಮೂಲಕ ಸರ್ವೆ ನಂ.7/3 ಮತ್ತು ಸರ್ವೆ ನಂ.63/1 ಆಸ್ತಿಗಳನ್ನು ಸುಮಾರು 50 ವರ್ಷಗಳ ಹಿಂದೆಯೆ ಒಟ್ಟು 3 ಭಾಗವಾಗಿ ಪಾಲು ಮಾಡಿಕೊಂಡು, ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಅವರವರೇ ಸ್ವಾಧೀನಾನುಭವದಲ್ಲಿ ಇದ್ದು ಅನುಭವಿಸಿ ಕೊಂಡು ಬಂದಿರುತ್ತಾರೆ.

ವಾದಿಯು ತನ್ನ ವಾದ ಪತ್ರದಲ್ಲಿ ಮುಂದುವರೆದು ಹೇಳುವುದೇನೆಂದರೆ, ಬಾಯಿಮಾತಿನ ಮೂಲಕ ಪಾಲು ಮಾಡಿಕೊಂಡ ಕಾಲಕ್ಕೆ ಸದರಿ ಆಸ್ತಿಗಳನ್ನು ಅಳತೆ ಮಾಡಿಸಿಕೊಂಡಿರುವುದಿಲ್ಲ. ರಂಗಣ್ಣ ಮತ್ತು ಹನುಮಕ್ಕ ರವರ ಮೂರು ಜನ ಮಕ್ಕಳು ಅಂದರೆ 1. ಗುಡುದಪ್ಪ ಬಿನ್ ರಂಗಣ್ಣ 2. ಗಿರಿಯಪ್ಪ ಬಿನ್ ರಂಗಣ್ಣ ಮತ್ತು 3 ಗೋವಿಂದಪ್ಪ ಬಿನ್ ರಂಗಣ್ಣ ಇವರು ಸಹ ವಾದಿ

ಮತ್ತು ಪ್ರತಿವಾದಿಗಳನ್ನು ಬಿಟ್ಟು ಮರಣ ಹೊಂದಿರುತ್ತಾರೆ. ಸದರಿ ರಂಗಣ್ಣನ ಮೂರು ಜನ ಮಕ್ಕಳು ಬಾಯಿಮಾತಿನ ಮೂಲಕ 3 ಪಾಲು ಮಾಡಿಕೊಂಡ ಆಸ್ತಿಗಳನ್ನು ರಂಗಣ್ಣನ ಮೂರು ಜನ ಮಕ್ಕಳ ಮಕ್ಕಳು ಅಂದರೆ ವಾದಿ ಮತ್ತು ಪ್ರತಿವಾದಿಗಳು ಮತ್ತೆ ಬಾಯಿ ಮಾತಿನ ಮೂಲಕ ಸುಮಾರು 30 ವರ್ಷದ ಹಿಂದೆಯೇ ವಿಭಾಗ ಮಾಡಿಕೊಂಡು, ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇವತ್ತಿಗೂ ಸಹ ಅನುಭವಿಸುತ್ತಿದ್ದಾರೆ. ಸದರಿ ಬಾಯಿ ಮಾತಿನ ವಿಭಾಗದ ಮೂಲಕ ಬಂದ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುತ್ತಾರೆ. ರಂಗಣ್ಣನ ಮಕ್ಕಳು ವಿಭಾಗ ಮಾಡಿಕೊಂಡ ಆಸ್ತಿಗಳಲ್ಲಿ ರಂಗಣ್ಣನ ಮಕ್ಕಳು ಮರಣ ಹೊಂದಿದಾಗ ಅವರ ಸಮಾಧಿಗಳನ್ನು ಅಲ್ಲೇ ಮಾಡಿರುತ್ತಾರೆ.

ವಾದಿಯು ವಾದ ಪತ್ರದಲ್ಲಿ ಮುಂದುವರೆದು ಹೇಳುವುದೇನೆಂದರೆ, ಸರ್ವೆ ನಂ. 7/3 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 17 ಗುಂಟೆ. (ಖರಾಬು(ಅ)-12 ಗುಂಟೆ) ಜಮೀನಿಗೆ ಉತ್ತರ-ದಕ್ಷಿಣವಾಗಿ ಬದು ಹಾಕಿ ಹಂಚಿಕೊಂಡಿರುವ ಜಮೀನಿನಲ್ಲಿ ದಕ್ಷಿಣ-ಪೂರ್ವ ಭಾಗದ ದಿಕ್ಕಿನಲ್ಲಿನ ಜಮೀನು ರಂಗಣ್ಣನ 1 ನೇ ಮಗ ಗುಡುದಪ್ಪನಿಗೂ, ಸರ್ವೆ ನಂ.7/3 ರ ದಕ್ಷಿಣ-ಪಶ್ಚಿಮ ಭಾಗದ ದಿಕ್ಕಿನಲ್ಲಿನ ಜಮೀನು ರಂಗಣ್ಣನ 2 ನೇ ಮಗ ಗಿರಿಯಪ್ಪನಿಗೂ, ಸರ್ವೆ ನಂ.7/3 ರಲ್ಲಿ ಉತ್ತರ ದಿಕ್ಕಿನ ಭಾಗದಲ್ಲಿ ಉಳಿದಿರುವ ಜಮೀನು ರಂಗಣ್ಣನ 3 ನೇ ಮಗ

ಗೋವಿಂದಪ್ಪನ ಭಾಗಕ್ಕೆ ಬಂದಿರುತ್ತದೆ. ಸರ್ವೆ ನಂ 63/1 ರಲ್ಲಿ 2 ಗುಂಟೆ ಖರಾಬು ಸೇರಿ ಒಟ್ಟು 2 ಎಕರೆ 33 ಗುಂಟೆ ಜಮೀನ ಪೂರ್ವ- ಪಶ್ಚಿಮ ಬದು ಹಾಕಿ ಹಂಚಿಕೊಂಡಿರುವ ಜಮೀನಿನ ಉತ್ತರ ದಿಕ್ಕಿನ ಭಾಗದಲ್ಲಿ ರಂಗಣ್ಣನ ಮಗ ಗುಡುದಪ್ಪನಿಗೂ, ದಕ್ಷಿಣ ಭಾಗದ ದಿಕ್ಕಿನಲ್ಲಿ 3 ನೇ ಮಗ ಗೋವಿಂದಪ್ಪನಿಗೂ ಮತ್ತು ರಂಗಣ್ಣನ 2 ನೇ ಮಗ ಗಿರಿಯಪ್ಪನಿಗೆ ಮಧ್ಯ ಭಾಗದಲ್ಲಿನ ಜಮೀನು ಇವರ ಭಾಗಕ್ಕೆ ಬಂದಿರುತ್ತದೆ. ಬಾಯಿಮಾತಿನ ವಿಭಾಗದ ಮೂಲಕ ಸರ್ವೆ ನಂ. 7/3 ರಲ್ಲಿ ಉತ್ತರ-ದಕ್ಷಿಣವಾಗಿ ಬದು ಹಾಕಿ ಹಂಚಿಕೊಂಡಿರುವ ಜಮೀನಿನಲ್ಲಿ ದಕ್ಷಿಣ-ಪೂರ್ವ ಭಾಗದ ದಿಕ್ಕಿನಲ್ಲಿನ ಜಮೀನು ರಂಗಣ್ಣನ 1 ನೇ ಮಗ ಗುಡುದಪ್ಪನ ಮಕ್ಕಳಾದ ಲಕ್ಕಪ್ಪ, ರಂಗಪ್ಪ, ಹನುಮಂತಪ್ಪ ಮತ್ತು ಚಂದ್ರಪ್ಪ ಇವರ ಭಾಗಕ್ಕೆ ಬಂದಿರುತ್ತದೆ ಮತ್ತು ಸದರಿ ಆಸ್ತಿಯನ್ನು ಅವರುಗಳೇ ಅನುಭವಿಸಿಕೊಂಡು ಬರುತ್ತಿದ್ದಾರೆ. ಸರ್ವೆ ನಂ.7/3 ರಲ್ಲಿ ದಕ್ಷಿಣ-ಪಶ್ಚಿಮ ಭಾಗದ ದಿಕ್ಕಿನಲ್ಲಿನ ಜಮೀನು ರಂಗಣ್ಣನ 2 ನೇ ಮಗ ಗಿರಿಯಪ್ಪನ ಮಕ್ಕಳಾದ ರಾಮಪ್ಪ, ವೀರಭದ್ರಪ್ಪ, ಹನುಮಂತಪ್ಪನ ಹೆಂಡತಿ ಶಾರದಮ್ಮ ಮತ್ತು ದೊಡ್ಡರಂಗಪ್ಪ ರವರ ಭಾಗಕ್ಕೆ ಬಂದಿರುತ್ತದೆ. ಸದರಿ ಭಾಗದಲ್ಲಿ ಬಂದಂತಹ ಆಸ್ತಿಯನ್ನು ಅವರೇ ಸ್ವಾಧೀನಾನುಭವದಲ್ಲಿರುತ್ತಾರೆ.

ವಾದಿಯು ತನ್ನ ವಾದ ಪತ್ರದಲ್ಲಿ ಮುಂದುವರೆದು ಹೇಳುವುದೇನೆಂದರೆ, ರಂಗಣ್ಣನ 3 ನೇ ಮಗ ಗೋವಿಂದಪ್ಪನ ಮಕ್ಕಳಾದ ದೇವೀರಪ್ಪ,

ಹನುಮಂತಪ್ಪ ಮತ್ತು ರಂಗಪ್ಪ ರವರು ಸರ್ವೆ ನಂ 7/3 ರಲ್ಲಿ, ಉತ್ತರ ದಿಕ್ಕಿನಲ್ಲಿನ ಜಮೀನು ಇವರ ಭಾಗಕ್ಕೆ ಬಂದಿರುತ್ತದೆ ಸರ್ವೆ ನಂ.7/3 ರಲ್ಲಿ ಉತ್ತರ ದಿಕ್ಕಿನ ಭಾಗದಲ್ಲಿನ ಜಮೀನು ರಂಗಣ್ಣನ 3 ನೇ ಮಗ ಗೋವಿಂದಪ್ಪನ ಭಾಗಕ್ಕೆ ಬಂದಂತಹ ಜಮೀನಿನಲ್ಲಿ ಪಶ್ಚಿಮ ಭಾಗದಲ್ಲಿ ಹನುಮಂತಪ್ಪ ಮತ್ತು ರಂಗಪ್ಪ ನವರಿಗೂ ಹಾಗೂ ವಾದಿ ದೇವೀರಪ್ಪನವರಿಗೆ ಪೂರ್ವಭಾಗದಲ್ಲಿ ಷಡ್ಯೂಲ್-2(ಇ) ಜಮೀನು ಬಂದಿರುತ್ತದೆ. ಸದರಿ ಜಮೀನನ್ನು ವಾದಿಯು ಬಹಳ ಹಣ ಖರ್ಚು ಮಾಡಿ ಅಭಿವೃದ್ದಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆ. ದಾವಾ ಷಡ್ಯೂಲ್ 1 ರ ಸರ್ವೆ ನಂ 63/1 ರಲ್ಲಿ 2 ಗುಂಟೆ ಖರಾಬು ಸೇರಿ ಒಟ್ಟು 2 ಎಕರೆ 33 ಗುಂಟೆ ಜಮೀನನ್ನು ಪೂರ್ವ-ಪಶ್ಚಿಮ ಬದು ಹಾಕಿ ಹಂಚಿಕೊಂಡಿರುವ ಜಮೀನಿನ ಉತ್ತರ ದಿಕ್ಕಿನ ಭಾಗದಲ್ಲಿ ರಂಗಣ್ಣನ 1 ನೇ ಮಗ ಗುಡುದಪ್ಪನವರಿಗೆ ಬಂದ ಆಸ್ತಿಯನ್ನು ಗುಡುದಪ್ಪನ ಮಕ್ಕಳಾದ ಲಕ್ಕಪ್ಪ, ರಂಗಪ್ಪ, ಹನುಮಂತಪ್ಪ ಮತ್ತು ಚಂದ್ರಪ್ಪ ಇವರು ಭಾಗ ಮಾಡಿಕೊಂಡು ಅವರುಗಳೇ ಅನುಭವಿಸಿಕೊಂಡು ಬರುತ್ತಿದ್ದಾರೆ. ಸರ್ವೆ ನಂ.63/1 ರಲ್ಲಿ ಮಧ್ಯ ಭಾಗದಲ್ಲಿನ ಜಮೀನು ರಂಗಣ್ಣನ 2 ನೇ ಮಗ ಗಿರಿಯಪ್ಪನ ಮಕ್ಕಳಾದ ರಾಮಪ್ಪ, ವೀರಭದ್ರಪ್ಪ, ಹನುಮಂತಪ್ಪ ನ ಹೆಂಡತಿ ಶಾರದಮ್ಮ ಮತ್ತು ದೊಡ್ಡರಂಗಪ್ಪ ರವರ ಭಾಗಕ್ಕೆ ಬಂದಿರುತ್ತದೆ. ಸದರಿ ಭಾಗದಲ್ಲಿ ಬಂದಂತಹ ಆಸ್ತಿಯನ್ನು ಅವರೇ ಸ್ವಾಧೀನಾನುಭದಲ್ಲಿರುತ್ತಾರೆ.

ರಂಗಣ್ಣನ 3 ನೇ ಮಗ ಗೋವಿಂದಪ್ಪನ ಮಕ್ಕಳಾದ ದೇವಿರಪ್ಪ ,

ಹನುಮಂತಪ್ಪ ಮತ್ತು ರಂಗಪ್ಪರವರಿಗೆ ಸರ್ವೆ ನಂ. 63/1 ರಲ್ಲಿ ದಕ್ಷಿಣ ದಿಕ್ಕಿನ ಭಾಗದಲ್ಲಿನ ಜಮೀನು ಬಂದಿರುತ್ತದೆ. ಹನುಮಂತಪ್ಪ ಮತ್ತು ರಂಗಪ್ಪನವರಿಗೆ ದಕ್ಷಿಣ-ಪಶ್ಚಿಮದ ಕಡೆಗೆ ಮತ್ತು ವಾದಿ ದೇವಿರಪ್ಪನವರಿಗೆ ದಕ್ಷಿಣ-ಪೂರ್ವದ ಕಡೆ ಅಂದರೆ ಶೆಡ್ಯೂಲ್-2(ಈ) ಬಂದಿರುತ್ತದೆ ಅಂದಿನಿಂದಲೂ ಇವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಸದರಿ ಜಮೀನನ್ನು ವಾದಿಯು ಬಹಳ ಹಣ ಖರ್ಚು ಮಾಡಿ ಅಭಿವೃದ್ದಿ ಮಾಡಿಕೊಂಡು ಬಂದಿರುತ್ತಾರೆ. ಸದರಿ ಬಾಯಿಮಾತಿನ ಪಾಲು ವಿಭಾಗದಂತೆ ವಾದಿ ಮತ್ತು ಪ್ರತಿವಾದಿಗಳಿಗೆ ಬಂದಿರುವ ಆಸ್ತಿಯ ಆಳತೆ ಮಾಡಿಸಿ ನಕ್ಷೆಯನ್ನು ತಯಾರಿಸಿ ಅವರವರ ಆಸ್ತಿಗೆ ಸಂಬಂದಿಸಿದಂತೆ ವಿಭಾಗಪತ್ರ ಮತ್ತು ಖಾತೆ ಮಾಡಿಸಿ ಕೊಳ್ಳಲು ವಾದಿಯು ಪ್ರತಿವಾದಿಯರನ್ನು ಕೇಳಿದಾಗ ಪ್ರತಿವಾದಿಗಳು ಸಹಕಾರ ನೀಡದೆ ವಿರೋದಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ವಾದಿ ಬೇಕಾದರೆ ಮಾನ್ಯ ನ್ಯಾಯಾಲದಲ್ಲಿ ವಿಭಾಗ ಮತ್ತು ಖಾತೆ ಮಾಡಿಸಿ ಕೊಳ್ಳಬಹುದೆಂದು ಹೇಳಿರುತ್ತಾರೆ. ಮಾನ್ಯ ನ್ಯಾಯಾಲಯದ ಸಹಾಯವಿಲ್ಲದೆ ವಾದಿಯ ಭಾಗದ ಆಸ್ತಿಯ ಅಳತೆ, ಸರ್ವೆ, ಹದ್ದುಬಸ್ತು ಮಾಡಿಸಿಕೊಳ್ಳಲು ಮತ್ತು ಜಮೀನಿನ ಗಡಿ ಗುರ್ತಿಸಲು ವಾದಿಗೆ ಸಾಧ್ಯವಿರುವುದಿಲ್ಲ.

ಬಾಯಿಮಾತಿನ ಮೂಲಕ ವಿಭಾಗ ಮಾಡಿಕೊಂಡ ನಂತರ ಮತ್ತು ಈಗಲೂ ಸಹ ಪ್ರತ್ಯೇಕ ಸ್ವಾಧೀನಾನುಭದಲ್ಲಿರುವ ಆಸ್ತಿಗಳ ಬಗ್ಗೆ ಪ್ರತ್ಯೇಕ ಖಾತೆ

ಮತ್ತು ಆಸ್ತಿಗೆ ಸಂಬಂದಿಸಿದ ಎಲ್ಲಾ ವಿಧವಾದ ದಾಖಲೆಗಳನ್ನು ವಾದಿ ಮತ್ತು ಪ್ರತಿವಾದಿಗಳ ಹೆಸರಿಗೆ ಮಾಡಿಸಿಕೊಳ್ಳಲು ಅಥವಾ ವಾದಿಯು ಸ್ವಾಧೀನಾನುಭವದಲ್ಲಿರುವ ಸ್ವತ್ತುಗಳನ್ನು ವಾದಿಯ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರತಿವಾದಿಗಳನ್ನು ವಾದಿಯು ಕೇಳಿದಾಗ ಪ್ರತಿವಾದಿಯರು ಸಕಾರಣವಿಲ್ಲದೆ ನಿರಾಕರಿಸುತ್ತಾ ಬಂದಿರುತ್ತಾರೆ. ಈ ಬಗ್ಗೆ ವಾದಿಯು ಊರಿನ ಪ್ರಮುಖ ಹಿರಿಯರೊಂದಿಗೆ ಬುದ್ದಿ ಹೇಳಿಸಿದರೂ, ಪಂಚಾಯಿತಿ ಮಾಡಿಸಿದರೂ ಪ್ರತಿವಾದಿಯರು ಒಪ್ಪಿರುವುದಿಲ್ಲ.

ವಾದಿಯು ತನ್ನ ವಾದ ಪತ್ರದಲ್ಲಿ ಮುಂದುವರೆದು ಹೇಳುವುದೇನೆಂದರೆ, ವಾದಿಯು ಅನುಭವಿಸಿಕೊಂಡು ಬರುತ್ತಿರುವ ಮತ್ತು ಬಾಯಿಮಾತಿನಲ್ಲಿ ವಿಭಾಗ ಮಾಡಿಕೊಂಡಿರುವ ಜಮೀನಿನ ಖಾತೆಯನ್ನು ವಾದಿಯ ಹೆಸರಿಗೆ ಬದಲಾವಣೆ ಮಾಡಬೇಕಾಗಿರುತ್ತದೆ. ಸದರಿ ಜಮೀನುಗಳ ಅಭಿವೃದ್ದಿಗಾಗಿ ಜಮೀನುಗಳ ಖಾತೆ ಬದಲಾವಣೆ ಮಾಡಬೇಕಾಗಿರುವುದರಿಂದ ಮತ್ತು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಮತ್ತು ಸರ್ಕಾರದಿಂದ ದೊರೆಯುವ ಆರ್ಥಿಕ ನೆರವನ್ನು ಪಡೆಯುವ ಉದ್ದೇಶದಿಂದ ಜಮೀನುಗಳ ಖಾತೆ ಬದಲಾವಣೆ, ಅಳತೆ, ಸರ್ವೆ, ಪೋಡಿ, ಹದ್ದುಬಸ್ತು ಮಾಡಿಸಬೇಕಾಗಿರುತ್ತದೆ.

ಈ ದಾವೆಗೆ ವ್ಯಾಜ್ಯ ಕಾರಣವು ಜನವರಿ 2015 ರ ಮೊದಲ ವಾರದಲ್ಲಿ ವಾದಿಯು ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ತಮ್ಮ ಪ್ರತ್ಯೇಕವಾದ

ಸ್ವಾಧೀನಾನುಭವದಲ್ಲಿರುವ ಆಸ್ತಿಯ ಖಾತೆ ಮಾಡಿಸಿಕೊಳ್ಳಲು ಕೇಳಿದಾಗ ಪ್ರತಿವಾದಿಯರು ನಿರಾಕರಿಸಿದಾಗ ಉಂಟಾಗಿರುತ್ತದೆ. ವಾದಿಯು ಈ ನ್ಯಾಯಾಲಯದಲ್ಲಿ ಈ ಹಿಂದೆ ಪಾಲು ವಿಭಾಗಕ್ಕಾಗಿ ಒ ಎಸ್. ನಂ.61/2015 ರಲ್ಲಿ ದಾವೆ ಸಲ್ಲಿಸಿದ್ದು , ಸದರಿ ದಾವೆಯನ್ನು ಮಾನ್ಯ ನ್ಯಾಯಾಲಯದ ಅನುಮತಿಯ ಮೇಲೆ ವಾಪಾಸ್ ಪಡೆದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತನ್ನ ಪರ ಡಿಕ್ರಿ ಮಾಡಬೇಕೆಂದು ವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

3. ಪ್ರತಿವಾದಿಗಳಿಗೆ ದಾವೆಯ ಸಮನ್ಸನ್ನ ಕಳುಹಿಸಲಾಗಿ, ಸದರಿ ಸಮನ್ಸ್ ಪ್ರತಿವಾದಿಯರಿಗೆ ತಲುಪಿದ್ದು, ಪ್ರತಿವಾದಿ-1, 2, 5 ಮತ್ತು 6 ರವರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ - 3, 4 , 7 ರಿಂದ 10 ರವರು ಸಮನ್ಸ್ ತಲುಪಿದ್ದರೂ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಅವರುಗಳನ್ನು ಏಕಪಕ್ಷೀಯ ಎಂದು ಪರಿಗಣಿಸಲಾಗಿದೆ.

**4. <u>1, 2, 5 ಮತ್ತು 6 ನೇ ಪ್ರತಿವಾದಿಯರ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:-</u>**

ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ/ಪ್ರತಿವಾದ ಪತ್ರದಲ್ಲಿ ವಾದ ಪತ್ರದಲ್ಲಿನ ಅಂಶಗಳನ್ನು ಅಲ್ಲಗಳೆದಿದ್ದು , ವಂಶವೃಕ್ಷವನ್ನು ಸಹ

ಭಾಗಶಃ ಅಲ್ಲಗಳೆದಿರುತ್ತಾರೆ. ಮುಂದುವರೆದು ದಾವಾ ಅನುಸೂಚಿ ಸ್ವತ್ತು-1 ಮತ್ತು 2 ಇವು ಗುಡುದಪ್ಪ , ಗಿರಿಯಪ್ಪ ಮತ್ತು ಗೋವಿಂದಪ್ಪ ಇವರ ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ಅವರು ತಮ್ಮ ಜೀವಿತ ಅವಧಿಯ ವರೆಗೂ ಸದರಿ ಸ್ವತ್ತುಗಳನ್ನು ಅನುಭವಿಸಿದ್ದು , ಅವರ ಮರಣಾನಂತರ ಒಟ್ಟು ಕುಟುಂಬದ ಸ್ವತ್ತಾಗಿ ವಾದಿ ಮತ್ತು ಪ್ರತಿವಾದಿಯರು ಅನುಭವಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡವೆ ಭಿನ್ನಾಭಿಪ್ರಾಯ ಉಂಟಾಗಿ ಗುರು ಹಿರಿಯರ ಸಮಕ್ಷಮದಲ್ಲಿ ದಿಃ 20.08.2002 ರಂದು ದಾವಾ ಅನುಸೂಚಿ ಸಂಖ್ಯೆ 1 ಮತ್ತು 2 ನ್ನು ವಾದಿ , ಪ್ರತಿವಾದಿ -1, 2, ಪ್ರತಿವಾದಿ -3 ರವರ ತಂದೆ ಲಕ್ಕಪ್ಪ , ರಂಗಪ್ಪ ಮತ್ತು 4ನೇ ಪ್ರತಿವಾದಿಯ ಗಂಡ ಪ್ರತಿವಾದಿ-5 ರಿಂದ 10 ರವರು ಪಾಲು ಪಟ್ಟಿಯನ್ನು ಮಾಡಿಕೊಂಡು ಅದಕ್ಕೆ ಸಹಿ ಹಾಕಿರುತ್ತಾರೆ. ಸದರಿ ಪಾಲು ಪಟ್ಟಿಯು ವಾದಿಯ ಕೈಯಲ್ಲಿಯೇ ಇರುತ್ತದೆ. ಸದರಿ ವಿಭಾಗದಲ್ಲಿ ದಾವಾ ಅನುಸೂಚಿ 1ನೇ ಸ್ವತ್ತು ಸರ್ವೆ ನಂ. 7/3 ರಲ್ಲಿ 3 ಎಕರೆ 17 ಗುಂಟೆಯನ್ನು ಉತ್ತರಃದಕ್ಷಿಣವಾಗಿ 3 ಭಾಗಗಳಾಗಿ ಮಾಡಿದ್ದು , ಪೂರ್ವದಲ್ಲಿ 1 ಎಕರೆ 5 ಗುಂಟೆ ಗುಡದಪ್ಪನ ಮಕ್ಕಳಿಗೂ ಮಧ್ಯ ಭಾಗ 1 ಎಕರೆ 5 ಗುಂಟೆ ಗೋವಿಂದಪ್ಪನ ಮಕ್ಕಳಿಗೂ, ಪಶ್ಚಿಮದ ಭಾಗ 1 ಎಕರೆ 7 ಗುಂಟೆ ಗಿರಿಯಪ್ಪನ ಮಕ್ಕಳಿಗೂ ಹೋಗಿದ್ದು , ಆಗಿನಿಂದಲೂ ವಾದಿ ಮತ್ತು ಪ್ರತಿವಾದಿಗಳು ಅವರವರ ಭಾಗವನ್ನು ಸ್ವಾಧೀನ ಮತ್ತು ಅನುಭೋಗ ಹೊಂದಿ ಸರ್ಕಾರಕ್ಕೆ ಕಂದಾಯವನ್ನು ಪಾವತಿಸುತ್ತಾ ಬಂದಿರುತ್ತಾರೆ.

ದಿಃ 20.08.2002 ರಲ್ಲಿ ಆದ ಪಾಲು ಪಟ್ಟಿಯಂತೆ ತಹಶೀಲ್ದಾರ್ ಹೊಸದುರ್ಗ ಇವರಿಗೆ ದಿ ಃ 09.03.2003 ರಂದು ಖಾತೆಯನ್ನು ಬದಲಾವಣೆ ಮಾಡಿಕೊಡುವಂತೆ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. ವಾದಿಯ ಅರ್ಜಿಯ ಆಧಾರದ ಮೇಲೆ ತಹಸೀಲ್ದಾರವರು ಪಾಲು ವಿಭಾಗ ಪತ್ರ ದಿಃ 20.08.2002 ರಂತೆ ಖಾತೆಯನ್ನು ಆರ್. ಆರ್ 22/2006-07 ರಂತೆ ಖಾತೆ ಬದಲಾವಣೆ ಮಾಡಿರುತ್ತಾರೆ.

ಮುಂದುವರೆದು ಪ್ರತಿವಾದಿ -1 ರಿಂದ 4 ರವರಿಗೆ ವಾದಿ ಮತ್ತು ದಂಡಪ್ಪ ಬಿನ್ ಲಕ್ಕಪ್ಪ ಇವರುಗಳು ಷರೀಕ್ಕಾಗಿ ದಿಃ 23.04.2003 ರಂದು ಸುಳ್ಳು ವಿಭಾಗವನ್ನು ಮಾಡಿಕೊಂಡಿರುವ ವಿಚಾರ ತಿಳಿದುಬಂದಿರುತ್ತದೆ. 1 ನೇ ಪ್ರತಿವಾದಿಯು ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಇವರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು , ಸಮನ್ಸ್ ಜಾರಿಯಾದ ನಂತರವೂ ಸಹ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿರುವುದಿಲ್ಲ. ದಿಃ 23.12.2011 ರಂದು ಆರ್.ಎ ನಂ.236/2008-09 ರಂತೆ ಆದೇಶವಾಗಿದ್ದು , ಮೇಲ್ಮನವಿಯು ಪುರಸ್ಕರಿಸಲ್ಪಟ್ಟಿರುತ್ತದೆ. ಲಿಖಿತ ಹೇಳಿಕೆಯ ಪ್ರಕಾರ ಖಾತೆ ಮಾಡಲು ಆದೇಶ ಆಗಿರುತ್ತದೆ. ಖಾತೆಯು ಸದರಿ ಆದೇಶದಂತೆ ಬದಲಾವಣೆ ಆಗಿರುವುದಿಲ್ಲ. ತಹಸೀಲ್ದಾರವರ ಮುಂದೆ ವಾದಿಯು ಸುಳ್ಳು ವಂಶವೃಕ್ಷವನ್ನು ನೀಡಿರುತ್ತಾರೆ. ವಾದಿಯು ಪ್ರತಿವಾದಿ-1 ರಿಂದ 4 ರವರಿಗೆ ಹಿಂಸೆಯನ್ನು ನೀಡುವ ಉದ್ದೇಶದಿಂದಲೇ ತಂತಿ ಕಂಬಗಳನ್ನು ಹಾಕಿದ್ದು ಸುಳ್ಳು ದಾವೆಯನ್ನು

ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಪ್ರತಿವಾದಿಯರು ಮುಂದುವರೆದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳುವುದೇನೆಂದರೆ, ಪ್ರತಿವಾದಿ-1 ಚಂದ್ರಪ್ಪ, ತಹಸೀಲ್ದಾರ್ ಹೊಸದುರ್ಗ ಇವರ ಮುಂದೆ ತಂತಿ ಬೇಲಿಗಳನ್ನು ಕಾನೂನು ಬಾಹಿರವಾಗಿ ಹಾಕಿರುವ ತಂತಿ ಬೇಲಿಯನ್ನು ತೆಗೆಯುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಕಾನೂನು ಬಾಹಿರ ಖಾತೆಯ ಬದಲಾವಣೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆರ್ ಆರ್ ಟಿ ಸಿ ಆರ್ 544/2012-13 ದಿಃ 05.03.2013 ರಂತೆ ದಾವೆಯು ನೋಂದಣಿಯಾಗಿರುತ್ತದೆ. ನಂತರ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿರುವುದಿಲ್ಲ. ಪ್ರತಿವಾದಿ-1 ತಹಸೀಲ್ದಾರ್ ಹೊಸದುರ್ಗ ಮತ್ತು ಪಿ ಎಸ್ ಐ ಹೊಸದುರ್ಗ, ಎಸ್.ಪಿ, ಎ.ಸಿ, ಡಿ.ಸಿ , ಚಿತ್ರದುರ್ಗ ಇವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಉಪ ವಿಭಾಗಧಿಕಾರಿ ಚಿತ್ರದುರ್ಗ, ಇವರು ತಹಶೀಲ್ದಾರ್, ಹೊಸದುರ್ಗ ಇವರಿಗೆ ದಿಃ 05.01.2018 ರಂದು ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿರುತ್ತಾರೆ. ಜಿಲ್ಲಾಧಿಕಾರಿಗಳು , ಚಿತ್ರದುರ್ಗ ಇವರು ದಿಃ 29.12.2017 ರಂದು ತಹಸೀಲ್ದಾರ್, ಹೊಸದುರ್ಗ ಇವರಿಗೆ ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿರುತ್ತಾರೆ. ಸದರಿ ದಾವೆಯ ವಾದಿಯು ಅಸಲು ದಾವಾ ಸಂಖ್ಯೆ 61/2015 ರಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಹನುಮಂತಪ್ಪ ಮತ್ತು ಇತರರ ವಿರುದ್ಧ ದಾವೆಯನ್ನು ಈಗಾಗಲೇ ಸಲ್ಲಿಸಿದ್ದು , ಸದರಿ ದಾವೆಯನ್ನು ಹಿಂಪಡೆದುಕೊಂಡಿರುತ್ತಾರೆ

ಮತ್ತು ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಯರ ವಿರುದ್ಧ ಸದರಿ ದಾವೆಯನ್ನು ತಂದಿರುತ್ತಾರೆ. ಪ್ರತಿವಾದಿಗಳು ನಕ್ಷೆಯಲ್ಲಿರುವಂತೆ ಸ್ವತ್ತುಗಳ ಸ್ವಾಧೀನ ಮತ್ತು ಅನುಭೋಗದಲ್ಲಿ ಇರುತ್ತಾರೆ. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

5. ಈ ನ್ಯಾಯಾಲಯವು ವಾದಿಯರ ವಾದ ಪತ್ರ, ಪ್ರತಿವಾದಿಯರ ಲಿಖಿತ ಹೇಳಿಕೆಯನ್ನು ಆಧರಿಸಿ ಈ ದಾವೆಯ ಇತ್ಯರ್ಥಕ್ಕಾಗಿ ಈ ಕೆಳಕಂಡಂತೆ ವಿವಾದಾಂಶಗಳನ್ನು ರೂಪಿಸಿರುತ್ತದೆ.

**ವಿ ವಾ ದಾಂ ಶ ಗ ಳು**

1. Whether the plaintiff proves that, the suit schedule "B" properties have fallen to his share out of suit schedule "A" properties as per oral partition?

2. Whether the plaintiff proves the alleged interference by the defendants?

3. Whether the suit of the plaintiff is barred by law of limitation?

4. Whether the defendant No.1, 2, 5 & 6 prove the partition dated: 28.08.2002 as contended in para 20 of written statement?

5. Whether the suit of the plaintiff is not maintainable in view of order 23 rule 4 of C.P.C?

6. Whether the plaintiff is entitled for the reliefs sought?

7. What order or decree?

6. ಈ ಮೇಲ್ಕಂಡ ವಿವಾದಾಂಶಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು ಒಟ್ಟು 4 ದಾಖಲಾತಿಗಳನ್ನು ತಮ್ಮ ಪರವಾಗಿ ನಿಪಿ.1 ರಿಂದ ನಿಪಿ.4 ರಂತೆ ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ಯಾವುದೇ ವಿಚಾರಣೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

7. ವಾದವನ್ನು ಆಲಿಸಲಾಯಿತು. ನ್ಯಾಯಾಲಯವು ವಾದಿಯರ ವಾದ ಪತ್ರ, ಪ್ರತಿವಾದಿಯರ ಲಿಖಿತ ಹೇಳಿಕೆ ಹಾಗೂ ವಾದಿಯರು ಮತ್ತು ಪ್ರತಿವಾದಿಯರು ಮಂಡಿಸಿರುವ ಮೌಖಿಕ ಸಾಕ್ಷ್ಯ ಮತ್ತು ವಾದಿಯರ ದಾಖಲಾತಿ ಸಾಕ್ಷ್ಯ ಹಾಗೂ ಕಡತದಲ್ಲಿ ಲಭ್ಯವಿರುವ ಎಲ್ಲಾ ಪುರಾವೆಗಳನ್ನು ಪರಿಗಣನೆಗೆ ತೆಗೆದುಕೊಂಡು ಮೇಲ್ಕಂಡ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

| | | |
|---|---|---|
| ವಿವಾದಾಂಶ: 1 | - | ನಕಾರಾತ್ಮಕವಾಗಿ |
| ವಿವಾದಾಂಶ: 2 | - | ನಕಾರಾತ್ಮಕವಾಗಿ |
| ವಿವಾದಾಂಶ: 3 | - | ನಕಾರಾತ್ಮಕವಾಗಿ |
| ವಿವಾದಾಂಶ: 4 | - | ನಕಾರಾತ್ಮಕವಾಗಿ |
| ವಿವಾದಾಂಶ: 5 | - | ಈ ವಿವಾದಾಂಶವು ನನ್ನ ಪರಿಶೀಲನೆಗೆ ಅಗತ್ಯವಿಲ್ಲ. |
| ವಿವಾದಾಂಶ: 6 | - | ನಕಾರಾತ್ಮಕವಾಗಿ |

ವಿವಾದಾಂಶಃ 7 - ಈ ಕೆಳಕಂಡ ಕಾರಣಗಳಿಗಾಗಿ
ಅಂತಿಮ ಆದೇಶದ ಪ್ರಕಾರ

**ಕಾ ರ ಣ ಗ ಳು**

**8. ವಿವಾದಾಂಶ-1, 2 ಮತ್ತು 4ಃ** ಈ ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡುಬಂದರೂ ಸಹ ಆಂತರಿಕವಾಗಿ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆಃ-

9. ದಿವಾನಿ ಸ್ವರೂಪದ ದಾವೆಗಳಲ್ಲಿ ಸಾಮಾನ್ಯವಾಗಿ ತೀರ್ಪು ನೀಡಲು ಸಂಭಾವನೀತೆಯ ಬಾಹ್ಯವುಳ್ಳ ನಿಯಮ ಆಧಾರದ ಮೇರೆಗೆ ತೀರ್ಪನ್ನು ನೀಡಬಹುದಾಗಿದೆ. ಹಾಗಾಗಿ ಪ್ರತಿವಾದಿಯ ವಿರುದ್ಧ ವಾದಿಯು ಕೋರಿರುವ ಪರಿಹಾರವನ್ನು ಪಡೆಯಲು ವಾದಿಯು ಅರ್ಹರಾಗಿರುತ್ತಾರೆ ಎಂಬುದನ್ನು ಭಾರತೀಯ ಸಾಕ್ಷ್ಯಅಧಿನಿಯಮದ ಕಲಂ 101 ರಿಂದ 103 ರಲ್ಲಿ ನಿರ್ಧಿಷ್ಟಪಡಿಸಿರುವ ರುಜುವಾತಿನ ಭಾರವನ್ನು ವಾದಿಯು ಹೊಂದಿ ACTORI ILCUMBIT ONUS PROBONDI ಕಾನೂನಿನ ತತ್ವದ ಅನುಸಾರ ದಾವೆಯನ್ನು ಸಾಭೀತು ಪಡಿಸಿ ಸಮರ್ಥಿಸಬೇಕಾಗಿದ್ದು, ವಾದಿಯು ತನ್ನ ಕಾಲಿನ ಮೇಲೆ ತಾನೆ ನಿಂತು, ತನ್ನ ದಾವೆಯನ್ನು ಸಾಭೀತು ಪಡಿಸುವ ಹೊಣೆಗಾರಿಕೆ ತನ್ನ ಮೇಲೆ

ಹೊತ್ತಿರುತ್ತಾನೆ. ಹಾಗೆಯೇ, ಪ್ರತಿವಾದಿಯ ಪ್ರಕರಣದ ಬಲಹೀನತೆಯ ಲಾಭವನ್ನು ವಾದಿಯು ತನ್ನ ದಾವೆಯನ್ನು ಸಾಭೀತುಪಡಿಸಲು ಬಳಸಿಕೊಳ್ಳುವುದು ಸಿಂಧೂವಲ್ಲ ಎಂಬ ತೀರ್ಮಾನಿತ ನಿಯಮಗಳ ಅನುಸಾರ ಪ್ರಸ್ತುತ ತೀರ್ಪನ್ನು ನ್ಯಾಯಾಲಯವು ಈ ಮುಂದಿನಂತೆ ಸಕಾರಣೆಗಳನ್ನು ನೀಡಿದೆ.

10. ಪ್ರಸ್ತುತ ದಾವೆಯಲ್ಲಿ  ವಿವಾದಾಂಶ-1 ಮತ್ತು 2 ನ್ನು ರುಜುವಾತು ಪಡಿಸುವಂತಹ ಭಾರವು ವಾದಿಯ ಮೇಲೆ ಇದ್ದರೆ, ವಿವಾದಾಂಶ-4 ನ್ನು ರುಜುವಾತು ಪಡಿಸುವಂತಹ ಭಾರವು ಪ್ರತಿವಾದಿ - 1, 2, 5 ಮತ್ತು 6 ರವರ ಮೇಲೆ ಇರುತ್ತದೆ. ವಾದಿಯು ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ದಾವಾ ಅನುಸೂಚಿ ಬಿ ಸ್ವತ್ತು ಮೌಖಿಕ ಪಾಲು ವಿಭಾಗದ ಮೂಲಕ ತನ್ನ ಹಿಸ್ಸೆಗೆ ಬಂದಿರುವುದಾಗಿ ತಿಳಿಸಿದ್ದು , ಪ್ರತಿವಾದಿಗಳು ತಮ್ಮ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡುತ್ತಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಸದರಿ ಮೌಖಿಕ ಪಾಲು ವಿಭಾಗದಂತೆ ವಾದಿಯ ಹೆಸರಿಗೆ ಖಾತೆಯನ್ನು ಮಾಡಿಸಿಕೊಳ್ಳಲು ಪ್ರತಿವಾದಿಗಳು ನಿರಾಕರಿಸಿರುತ್ತಾರೆ ಎಂಬುದಾಗಿ ವಾದಿಯು ಆರೋಪಿಸಿದ್ದು , ಇದರಿಂದ ಹಣಕಾಸು ಸಂಸ್ಥೆಗಳಲ್ಲಿ ಮತ್ತು ಸರ್ಕಾರದಿಂದ  ದೊರೆಯುವ ಆರ್ಥಿಕ ನೆರವನ್ನು ಪಡೆದುಕೊಳ್ಳಲು ಅಳತೆ, ಸರ್ವೆ ಪೋಡು, ಹದ್ದುಬಸ್ತು ಮಾಡುವುದು ಅವಶ್ಯಕವಾಗಿದ್ದು , ಪ್ರತಿವಾದಿಗಳು ನಿರಾಕಸಿರುತ್ತಾರೆ ಎಂದು

ಆರೋಪಿಸಿರುತ್ತಾರೆ. ಆರೋಪಿಸಿರುವಂತಹ ಅಂಶಗಳನ್ನು ಸಾಬೀತುಪಡಿಸಲು ವಾದಿ ತಾನು ಪಿಡಬ್ಲು-1 ಎಂದು ವಿಚಾರಣೆಗೆ ಒಳಪಟ್ಟು ತನ್ನ ಮುಖ್ಯ-ವಿಚಾರಣೆಯಲ್ಲಿ ವಾದಪತ್ರದ ಅಂಶಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ ಹಾಗೂ ವಾದಿ 4 ದಾಖಲೆಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಿಕೊಂಡಿರುತ್ತಾರೆ.

11. ವಾದಿಯ ಪರವಾಗಿ ಗುರುತಿಸಿಕೊಂಡಂತಹ ದಾಖಲಾತಿಗಳನ್ನು ಅವಲೋಕಿಸಿದಾಗ ನಿಪಿ.1 ಮತ್ತು 2 ಪಹಣಿ ಪತ್ರಿಕೆಗಳಾಗಿರುತ್ತವೆ. ನಿಪಿ.3 ಅಸಲು ದಾವಾ ಸಂಖ್ಯೆ 61/2015 ರ ಆದೇಶದ ಪ್ರತಿಯಾಗಿರುತ್ತದೆ. ನಿಪಿ.4 ಅಸಲು ದಾವಾ ಸಂಖ್ಯೆ 61/2015 ಆದೇಶ 23 ನಿಯಮ -1 ಜೊತೆಗೆ ಕಲಂ 151 ರಲ್ಲಿ ಸಲ್ಲಿಸಲಾದ ಮಧ್ಯಂತರ ಅರ್ಜಿಯ ದೃಢೀಕೃತ ಪ್ರತಿಯಾಗಿರುತ್ತದೆ.

12. ಇದಕ್ಕೆ ಪ್ರತಿಯಾಗಿ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಹೊರತುಪಡಿಸಿ ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುವುದಿಲ್ಲ ಮತ್ತು ಪಿಡಬ್ಲ್ಯೂ-1 ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ. ಆದರೂ ಸಹ ವಾದಿಯೇ ತನ್ನ ದಾವೆಯನ್ನು ರುಜುವಾತುಪಡಿಸುವಂತಹ ಭಾರವನ್ನು ಹೊಂದಿರುತ್ತಾರೆ. ವಾದಿಯು ಹಾಜರುಪಡಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ

ಪರಿಶೀಲಿಸಿ ನೋಡಲಾಗಿ ನಿಪಿ.1 ದಾವಾ 1 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿರುತ್ತದೆ. ಸದರಿ ಪಹಣಿ ಪತ್ರಿಕೆಯು ತಿಮ್ಮಕ್ಕ ಕೋಂ ಲಕ್ಕಪ್ಪ , ದೇವೇಂದ್ರಪ್ಪ ಬಿನ್ ಲಕ್ಕಪ್ಪ , ಕರಿಯಮ್ಮ ಕೋಂ ರಂಗಪ್ಪ , ಹನುಮಂತಪ್ಪ ಬಿನ್ ಗುಡದಪ್ಪ , ಚಂದ್ರಪ್ಪ ಬಿನ್ ಗುಡದಪ್ಪ, ದೇವಿರಪ್ಪ ಬಿನ್ ಗೋವಿಂದಪ್ಪ , ಹನುಮಂತಪ್ಪ ಬಿನ್ ಗೋವಿಂದಪ್ಪ , ರಂಗಪ್ಪ ಬಿನ್ ಗೋವಿಂದಪ್ಪ , ರಾಮಪ್ಪ ಬಿನ್ ಗಿರಿಯಪ್ಪ ಇವರ ಹೆಸರಿನಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 5 ಗುಂಟೆ ಜಂಟಿಯಾಗಿರುವಂತಹದ್ದು ಕಂಡುಬರುತ್ತದೆ.

13. ನಿಪಿ.2 ದಾವಾ 2 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿರುತ್ತದೆ. ಸದರಿ ಪಹಣಿ ಪತ್ರಿಕೆಯು ತಿಮ್ಮಕ್ಕ ಕೋಂ ಲಕ್ಕಪ್ಪ , ದೇವೇಂದ್ರಪ್ಪ ಬಿನ್ ಲಕ್ಕಪ್ಪ , ಕರಿಯಮ್ಮ ಕೋಂ ರಂಗಪ್ಪ , ಹನುಮಂತಪ್ಪ ಬಿನ್ ಗುಡದಪ್ಪ , ಜಿ. ಚಂದ್ರಪ್ಪ ಬಿನ್ ಗುಡದಪ್ಪ ಇವರ ಹೆಸರಿನಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 31 ಗುಂಟೆ ಜಂಟಿಯಾಗಿರುವಂತಹದ್ದು ಕಂಡುಬರುತ್ತದೆ. ಸದರಿ ಪಹಣಿಯು 2018-19 ನೇ ಸಾಲಿನ ಪಹಣಿ ಪತ್ರಿಕೆಯಾಗಿರುತ್ತದೆ.

14. ನಿಪಿ.1 ಮತ್ತು 2 ನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ದಾವಾ ಅನುಸೂಚಿ-ಬಿ ಸ್ವತ್ತು ವಾದಿಗೆ ವಿಭಾಗದ ಮೂಲಕ ಬಂದಿರುವುದು ಕಂಡುಬಂದಿರುವುದಿಲ್ಲ. ವಾದಿಯು ಹೇಳಿದಂತೆ ದಾವಾ ಶೆಡ್ಯೂಲ್ -1 ರಲ್ಲಿರುವ ಸ್ವತ್ತುಗಳು ಬಾಯಿ ಮಾತಿನ ಮೂಲಕ ಸುಮಾರು 50 ವರ್ಷಗಳ

ಹಿಂದೆಯೇ ಮೂಲ ಪುರುಷ ರಂಗಣ್ಣನ ಮಕ್ಕಳು ವಿಭಾಗ ಮಾಡಿಕೊಂಡಿರುವುದಾಗಿ ತಿಳಿಸಿದ್ದು , ಮುಂದುವರೆದು 30 ವರ್ಷಗಳ ಹಿಂದೆ ವಾದಿ ಮತ್ತು ಪ್ರತಿವಾದಿಗಳು ಪುನಃ ವಿಭಾಗ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ವಿಭಾಗದಂತೆ ಖಾತೆಯು ಬದಲಾವಣೆ ಆಗಿರುವುದು ಕಂಡುಬಂದಿರುವುದಿಲ್ಲ. ಆದುದರಿಂದ ವಿವಾದಾಂಶ-1 ಕ್ಕೆ ಸಂಬಂಧಿಸಿದಂತೆ ದಾವಾ ಅನುಸೂಚಿ-ಎ ಸ್ವತ್ತಿನಲ್ಲಿ ಮೌಖಿಕ ವಿಭಾಗದಂತೆ ದಾವಾ ಅನುಸೂಚಿ- ಬಿ ಸ್ವತ್ತು ವಾದಿಯ ಭಾಗಕ್ಕೆ ಬಂದಿರುತ್ತದೆ ಎಂದು ವಾದಿಯು ಮೌಖಿಕ ಮತ್ತು ದಾಖಲಾತಿ ಸಾಕ್ಷಿಗಳ ಮೂಲಕ ಸಾಭೀತುಪಡಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ನಿಪಿ.1 ಮತ್ತು 2 ವಾದಿ ಮತ್ತು ಪ್ರತಿವಾದಿಗಳ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ. ಮತ್ತು ಒಟ್ಟು ಕುಟುಂಬದ ಸದಸ್ಯರು ಎನ್ನುವುದು ನಿರ್ವಿವಾದವಾದ ಸಂಗತಿಯಾಗಿದ್ದು , ಪ್ರತಿವಾದಿಗಳು ವಾದಿಯ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡಿರುತ್ತಾರೆ ಎನ್ನುವುದನ್ನು ಸಹ ವಾದಿಯು ಸಾಭೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ದಿಃ 28.08.2002 ರಲ್ಲಿ ಆದ ವಿಭಜನೆಯೂ ಮೋಸದಿಂದ ಕೂಡಿರುತ್ತದೆ ಎಂದು ಪ್ರತಿವಾದಿಗಳು ಆರೋಪಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಯಾವುದೇ ಮೌಖಿಕ ಮತ್ತು ದಾಖಲಾತಿ ಸಾಕ್ಷಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ, ವಿವಾದಾಂಶ-1, 2 ಮತ್ತು 4 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**15. ವಿವಾದಾಂಶ-3ಃ** ದಾಖಲಾತಿಗಳು ಮತ್ತು ವಾದ ಪತ್ರವನ್ನು ಪರಿಶೀಲಿಸಿದಾಗ ಪ್ರತಿವಾದಿಯರು ದಾವೆ ಕಾಲಮಿತಿಯಿಂದ ನಿರ್ಭಂದಿತವಾಗಿದೆ ಎಂಬುದಾಗಿ ಕೇವಲ ಹೇಳಿಕೆ ನೀಡಿರುವುದು ಗೋಚರಿಸುತ್ತದೆ. ಆ ಹೇಳಿಕೆಯನ್ನು ಸಮರ್ತಿಸಲು ಯಾವುದೇ ದಾಖಲಾತಿಗಳನ್ನಾಗಲೀ , ಸಾಕ್ಷ್ಯವನ್ನಾಗಲೀ ಪ್ರತಿವಾದಿಯರು ಸಲ್ಲಿಸಿರುವುದಿಲ್ಲ ಮತ್ತು ವಸ್ತು ನಿಷ್ಟ ಮಾಹಿತಿ ಲಭ್ಯವಿಲ್ಲ. ಕಾಲಮಿತಿಯ ವಿಚಾರವನ್ನು ಪರಿಶೀಲಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಅದಾಗ್ಯೂ ವಾದಪತ್ರ ಮತ್ತು ದಾಖಲಾತಿಗಳ ಆಧಾರದ ಮೇಲೆ ದಾವೆ ಕಾಲಮಿತಿಯಿಂದ ನಿರ್ಭಂದಿತವಾಗಿದೆ ಎಂದು ಹೇಳಲು ಯಾವುದೇ ಆಧಾರಗಳು ಕಂಡುಬರುವುದಿಲ್ಲ. ಆದುದರಿಂದ ವಿವಾದಾಂಶ-3 ನಕಾರಾತ್ಮಕ ಎಂದು ಉತ್ತರಿಸಲಾಗಿದೆ.

**16. ವಿವಾದಾಂಶ-5** ಮೇಲಿನ ವಿವಾದಾಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದ, ಸದರಿ ವಿವಾದಾಂಶವು ನನ್ನ ಪರಿಶೀಲನೆಗೆ ಅಗತ್ಯವಿಲ್ಲ.

**17. ವಿವಾದಾಂಶ-6ಃ** ವಾದಿಯು ತನ್ನ ವಾದ ಪತ್ರದಲ್ಲಿ ತಿಳಿಸಿರುವಂತೆ ತನಗೆ ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ಇರುವ ಬಿ ಸ್ವತ್ತು ಮೌಖಿಕ ವಿಭಾಗದ ಮೂಲಕ ತನ್ನ ವಿಭಾಗಕ್ಕೆ ಬಂದಿರುತ್ತದೆ ಎನ್ನುವುದನ್ನು ಸಾಬೀತುಪಡಿಸದ ಕಾರಣ ವಾದಿಯು ದಾವೆಯಲ್ಲಿ ಕೇಳಿದಂತೆ ಪರಿಹಾರವನ್ನು ಪಡೆಯಲು

ತಾವು ಅರ್ಹರು ಎನ್ನುವುದನ್ನು ಸಾಬೀತುಪಡಿಸಿರುವುದಿಲ್ಲ. ಆದ್ದರಿಂದ ವಾದಿಯು ಈ ದಾವೆಯಲ್ಲಿ ಕೇಳಿದಂತೆ ಪರಿಹಾರವನ್ನು ಪಡೆಯಲು ಅರ್ಹರಾಗಿಲ್ಲವೆಂದು ತೀರ್ಮಾನಿಸಿ ವಿವಾದಾಂಶ-6ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**18. ವಿವಾದಾಂಶ-7** ಈ ಮೇಲಿನ ವಿವಾದಾಂಶ 1 ರಿಂದ 6 ರಲ್ಲಿ ಚರ್ಚಿಸಿದ ವಿಷಯಾನುಸಾರಾಗಿ ಈ ಕೆಳಕಂಡಂತೆ ಅಂತಿಮ ಆದೇಶಃ

**ಆ ದೇ ಶ**

ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಗೊಳಿಸಲಾಗಿದೆ.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ2 ನೇ ಮೇ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

**(ತ್ರಿನೇತ್ರ.ಎಂ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,**
**ಹೊಸದುರ್ಗ.**

**ಅನುಬಂಧ**

**ವಾದಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

ಪಿಡಬ್ಲ್ಯು-1 ಃ ಶ್ರೀ ದೇವಿರಪ್ಪ

**<u>ವಾದಿಯ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ</u>**

| | | |
|---|---|---|
| ನಿಪಿ-1 | - | ಸರ್ವೆ ನಂ. 7/3 ರ ಪಹಣಿ ಪತ್ರಿಕೆ |
| ನಿಪಿ-2 | - | ಓ.ಎಸ್ ನಂ. 33/2015 ರ ದೃಡೀಕೃತ ಪ್ರತಿವಾದ ಪತ್ರದ ಪ್ರತಿ |
| ನಿಪಿ-3 | - | ಓ.ಎಸ್ ನಂ. 33/2015 ರ ದೃಡೀಕೃತ ತೀರ್ಪಿನ ಪ್ರತಿ |
| ನಿಪಿ-4 | - | ಓ.ಎಸ್ ನಂ. 33/2015 ರ ಅರ್ಜಿ ಮೇಲಿನ ಆದೇಶದ ಪ್ರತಿ |

**<u>ಪ್ರತಿವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ</u>**

ಇಲ್ಲಾ

**<u>ಪ್ರತಿವಾದಿಯರ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ</u>**

ಇಲ್ಲಾ

THRINETHRA M N

Digitally signed by THRINETHRA M N
Date: 2026.05.14 17:37:23 +0530

**(ತ್ರಿನೇತ್ರ.ಎಂ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,**
**ಹೊಸದುರ್ಗ.**